**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ ಸಂಖ್ಯೆ: 752/2018**

| | | | |
|---|---|---|---|
| ಹೆಸರು | | ಶ್ರೀ ಕೆ ಮಧು | ಚಾಸಾಃ 4 |
| ತಂದೆ ಹೆಸರು | | ಶ್ರೀ ಹೆಚ್ ಕೆಂಪರಾಜಪ್ಪ | ಪ್ರಾಸಾಃ5 |
| ವಯಸ್ಸು | | 40 ವರ್ಷ | ಸಾಕ್ಷಿಯನ್ನು ದಿನಾಂಕಃ 04.02.2025 ರಂದು ಪ್ರಮಾಣೀಕರಿಸಲಾಯಿತು. |
| ಉದ್ಯೋಗ | | ವ್ಯವಸಾಯ | |
| ವಾಸ | | ಅಂಕಹಳ್ಳಿ ಗ್ರಾಮ ಗುಂಡ್ಲುಪೇಟೆ ತಾಲ್ಲೂಕು | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ-**

ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ನಿಪಿ- 4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಸಿ) ಎಂದು ಗುರುತಿಸಲಾಯಿತು. ನಿಪಿ-4ಕ್ಕೆ 2018 ರಂದು ನಾನು ಅಪಘಾತ ಸ್ಥಳದಲ್ಲಿ ಮಾದಹಳ್ಳಿ ಕ್ರಾಸ್ ಹತ್ತಿರ ಸಹಿ ಮಾಡಿರುತ್ತೇನೆ. ಪ್ರದೀಪ್ ಕುಮಾರ್ ರವರು ತೋರಿಸಿದ ಸ್ಥಳದಲ್ಲಿ ಪೊಲೀಸರು ಮಹಜರ್ ಮಾಡಿರುತ್ತಾರೆ. ಅಪಘಾತ ಸ್ಥಳದಲ್ಲಿ ಪೊಲೀಸರು 5.00 ರಿಂದ 6.00 ವರೆಗೆ ಮಹಜರ್ ಜರುಗಿಸಿ ಬೈಕ್ ಮತ್ತು ಕಾರಣನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಅಪಘಾತಕ್ಕೆ ಸಂಬಂಧಪಟ್ಟಂತೆ ವಾಹನ ನೋಡಿದರೆ ಗುರುತಿಸುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎಪಿಪಿರವರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ ಅನುಮತಿಸಿದೆ.)

**ಪಾಟೀ ಸವಾಲು: ಮಾನ್ಯ ಎಪಿಪಿ ಯವರಿಂದಃ**

ದಿಃ12.04.2018 ರಂದು ರಾಷ್ಟ್ರೀಯ ಹೆದ್ದಾರಿ 766 ರಲ್ಲಿ ಮಾದಹಳ್ಳಿ ಕ್ರಾಸ್ ಹತ್ತಿರ ಪಿರ್ಯಾದಿ ತೋರಿಸಿದ ಸ್ಥಳದಲ್ಲಿ ಪೊಲೀಸರು 5.15 ರಿಂದ 6.00 ವರೆಗೆ ಮಹಜರ್ ಮಾಡಿ ವಾಹನಗಳಾದ ಕೆಎಲ್ 05–Z–6051 ಮತ್ತು ಕೆಎ–45–ಜೆ–4522 ವಾಹನಗಳನ್ನು ಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಮಹಜರ್ ನಲ್ಲಿರುವ ವಿಚಾರ ತಿಳಿದು ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಬಿ ಎಸ್ ವಕೀಲರಿಂದಃ**

ನಾನು ಮಹಜರ್ ಮಾಡಿದ ದಿನ ಮೈಸೂರಿನಿಂದ ಬರುತ್ತಿದ್ದೆ. ನಾನು ನನ್ನ ಸ್ನೇಹಿತರಾದ ಪ್ರದೀಪ್, ಮದು ಕುಮಾರ್ ರವರ ಜೊತೆ ಬರುತ್ತಿದ್ದೆವು. ನಾವು ಕಾರಿನಲ್ಲಿ ಬರುತ್ತಿದ್ದೆವು. ನಾವು ಪ್ರಯಾಣ ಮಾಡುತ್ತಿದ್ದ ಕಾರು ನಂಬರ್ ನನಗೆ ಗೊತ್ತಿಲ್ಲ. ಅಪಘಾತಕ್ಕೆ ಸಂಬಂಧಪಟ್ಟ ವಾಹನಗಳ ನಂಬರ್ ನನಗೆ ಗೊತ್ತಿಲ್ಲ. ಮಹಜರ್ ಮಾಡಲು ಪೊಲೀಸರು ಕರೆದಿರುವುದಿಲ್ಲ. ಪ್ರದೀಪ್ ರವರು ಕರೆದಿರುತ್ತಾರೆ.

ಸ್ಥಳದಲ್ಲಿ ನಾನು ಹಾಜರಿರಲಿಲ್ಲ, ಯಾವುದೇ ಮಹಜರ್ ಮಾಡಿಲ್ಲ, ನಾನು ಮಹಜರ್ ಗೆ ಸಹಿ ಮಾಡಿಲ್ಲ, ಮಧು ಕುಮಾರ್ ರವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರದೀಪ್, ಮಧು ಕುಮಾರ್ ನನ್ನ ಸ್ನೇಹಿತ. ಮಧು ಕುಮಾರ್ ನನ್ನ ಸ್ನೇಹಿತರಾದ್ದರಿಂದ ಅವರ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ:**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಮಾಡಲಾಯಿತು)

**ಓ ಹೇ ಕೇ ಸ ಇ ಎ ಒ**

(ಎ.ಎನ್.ಕಾಂತಮ್ಮ)
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ಗುಂಡ್ಲುಪೇಟೆ**